## ಕಳೆದ ಸಂಚಿಕೆಯಲ್ಲಿ



ಲಾರ್ಸ್‌ನ ತಾಯಿ ಲಾರಾಳೊಂದಿಗೆ ನ್ಯಾನ್ಸಿಗೆ ಅತ್ತೆಯ ಸಂಬಂಧವನ್ನು ಮೀರಿದ ಗಾಢ ಸ್ನೇಹ ಬೆಳೆಯಿತು. ಇಬ್ಬರೂ ಗೆಳತಿಯರಂತೆ ಸುತ್ತಾಡತೊಡಗಿದರು, ಕಷ್ಟಸುಖಗಳನ್ನು ಹಂಚಿಕೊಳ್ಳತೊಡಗಿದರು. ಜೋಶುಆ ಓದುತ್ತಿದ್ದ ಶಾಲೆಯಲ್ಲಿಯೇ ನ್ಯಾನ್ಸಿಗೆ ಶಿಕ್ಷಕಿಯ ಉದ್ಯೋಗ ದೊರೆತದ್ದು ಅವಳ ಸಂಭ್ರಮವನ್ನು ಹೆಚ್ಚಿಸಿತು. ಅದೇ ಸಮಯಕ್ಕೆ ಲಾರಾ, ವಯಸ್ಸಾದ ತಾಯಿಯ ಕೊನೆಯ ದಿನಗಳಲ್ಲಿ ಅವಳೊಂದಿಗೆ ಇರುವ ಉದ್ದೇಶವನ್ನು ನ್ಯಾನ್ಸಿ ಬಳಿ ಹಂಚಿಕೊಂಡಳು. ನ್ಯಾನ್ಸಿ ಕೂಡ ಲಾರಾಳ ತಾಯಿಯನ್ನು ನೋಡಲಿಕ್ಕೆ ಹೋದಳು. ಹಣ್ಣು ಹಣ್ಣು ಅಜ್ಜಿ ಗ್ರೇಥಾಳಿಂದ ನ್ಯಾನ್ಸಿಗೆ ಬೆಚ್ಚನೆ ಪ್ರೀತಿ ದೊರೆಯಿತು. ಅಜ್ಜಿ ಜೋಶುಆನನ್ನು ಮುದ್ದಿಸಿದಳು. ನ್ಯಾನ್ಸಿ ಮತ್ತು ಲಾರ್ಸ್‌ನಿಂದ ಮರಿ ಮೊಮ್ಮಗನನ್ನು ಪಡೆಯುವ ಆಸೆಯನ್ನು ಅಜ್ಜಿ ವ್ಯಕ್ತಪಡಿಸಿದಳು. ನ್ಯಾನ್ಸಿಗೆ ಕೂಡ ಹೊಸ ಸಂಬಂಧದಿಂದ ಮಗುವನ್ನು ಪಡೆಯುವ ಬಯಕೆಯಾಯಿತು. ಹುಟ್ಟುವ ಮಗುವಿಗೆ ನೀಲ್ ಅಥವಾ ನೀಲಾ ಎನ್ನುವ ಹೆಸರಿಡುವ ಕನಸನ್ನೂ ಕಂಡಳು.

ತುಂಬಾ ಅಸಹಾಯಕಳಾದೆ. ಯಾರೊಂದಿಗೆ ನಾನು ಎಂದೂ ಮಾತನಾಡಬಾರದು, ಅವನ ಮುಖವನ್ನೂ ನೋಡಬಾರದು ಎಂದು ನಿರ್ಧರಿಸಿದ್ದೆನೋ, ಈಗ ವಿಧಿಯಿಲ್ಲದೆ ಅವನನ್ನೇ ಸಂಪರ್ಕಿಸಬೇಕಾಯಿತು. ಅಬ್ರಾಹಮ್‌ಗೆ ಜೋಶುವನ್ನು ನನ್ನ ಬಳಿ ಇಟ್ಟುಕೊಳ್ಳುವ ಬಗ್ಗೆ ನನ್ನ ಅಸಮರ್ಥತೆಯನ್ನು ಹೇಳಬೇಕಾಯಿತು. ಅಬ್ರಾಹಮ್ ತುಂಬಾ ಧೈರ್ಯದಿಂದ ನನ್ನ ಮಾತುಗಳನ್ನು ಕೇಳಿ, ನಂತರ ಹೇಳಿದ, 'ನಾನು ಮೊದಲೇ, ಜೋಶ್‌ಗೆ ಅಲ್ಲಿಯ ರೆಸಿಡೆಂಟ್ ಪರ್ಮಿಟ್ ಸಿಗುವುದು ಕಷ್ಟವಾಗಬಹುದು ಎಂದು ಹೇಳಿದ್ದೆ. ಸರಿ, ಅವನನ್ನು ನನ್ನ ಬಳಿ ಕಳಿಸು'. ನಂತರ ಒಂದು ಕ್ಷಣ ತಡೆದು ಹೇಳಿದ, 'ಸ್ವಲ್ಪ ಜೋಶ್‌ಗೆ ಫೋನ್ ಕೊಡು. ನಾನು ಅವನೊಂದಿಗೆ ಮಾತನಾಡಬೇಕು'.

ನಾನು ರಿಸೀವರನ್ನು ಜೋಶ್‌ಗೆ ಒಪ್ಪಿಸಿದೆ. ಅಬ್ರಾಹಮ್ ಅವನನ್ನು ಖುಷಿಪಡಿಸುತ್ತಾ ಹೇಳಿದ, 'ಓಹ್, ಹೀರೋ!' ನೀನು ಯೂರೋಪನ್ನು ಸಾಕಷ್ಟು ನೋಡಿದೆ, ಇನ್ನು ನಿನ್ನ ತಂದೆಯ ಬಳಿಯಿರಲು ಆಫ್ರಿಕಾಕ್ಕೆ ಬಾ'.

ಅದು ನನ್ನ ಜೀವನದ ಅತ್ಯಂತ ಅಸಹಾಯಕತೆ ಯಾಗಿತ್ತು, ನಾನು ನನ್ನ ಮಗನನ್ನು ಅಗಲ ಬೇಕಾಯಿತು. ಅವನನ್ನು ಅವನ ತಂದೆಯ ಬಳಿಗೆ ಕೀನ್ಯಾಗೆ ಕಳುಹಿಸಬೇಕಾಯಿತು. ನಾನು ಅವನನ್ನು ವಿಮಾನದಲ್ಲಿ ಕೂರಿಸಿದ ಕ್ಷಣದಿಂದ ಹಿಡಿದು ಇದುವರೆಗೆ ಅವನ ಮತ್ತು ನನ್ನ ಭೇಟಿ ಮತ್ತು ನಾವಿಬ್ಬರು ಒಟ್ಟಿಗೆ ಇರುವುದು ತುಂಬಾ ವಿರಳವಾಗುತ್ತದೆ. ನಾವು ಫೋನ್, ಸ್ಕೈಪ್‌ನಲ್ಲಿ ಮಾತನಾಡುತ್ತೇವೆ. ಅವನು ತನ್ನ ರಜದ ದಿನಗಳಲ್ಲಿ ನನ್ನ ಬಳಿಗೆ ಬರುತ್ತಾನೆ... ಆ ಕ್ಷಣಗಳಲ್ಲಿ ಮಿಲನ—ವಿರಹದ ವೇದನೆಯನ್ನು ನಾವಿಬ್ಬರು ಅನುಭವಿಸುತ್ತೇವೆ.

'ನಾನೂ ಸಹ ನನ್ನ ಹೆಣ್ಣು ಮಕ್ಕಳೊಂದಿಗೆ ವಿರಹ—ಮಿಲನವನ್ನೇ ಅನುಭವಿಸುತ್ತಿದ್ದೆ' ಪಾಲ್ ಕುಗ್ಗಿದ ಧ್ವನಿಯಲ್ಲಿ ಹೇಳಿದ.

'ನಿಮಗೆ ಎಷ್ಟು ಜನ ಹೆಣ್ಣು ಮಕ್ಕಳಿದ್ದಾರೆ?'

'ಇಬ್ಬರು. ಲೂಸಿ ಮತ್ತು ಗ್ರೇಸಿ. ಅವಳಿ ಹೆಣ್ಣುಮಕ್ಕಳು'.

'ಹೌದು, ನೀವು ಹೇಳಿದ್ದಿರಿ... ಈಗ ಅವರ ವಯಸ್ಸು ಎಷ್ಟು?'

'ಇಪ್ಪತ್ತನಾಲ್ಕು'.

'ಅವರ ತಾಯಿ?'

'ಮಕ್ಕಳಿಗೆ ಒಂದು ತಿಂಗಳಾದಾಗ, ಅವಳ ಮತ್ತು ನನ್ನ ವಿಚ್ಛೇದನವಾಗಿತ್ತು'.

'ಮಕ್ಕಳು ಎಲ್ಲಿ ದೊಡ್ಡವರಾದರು?'

'ತಮ್ಮ ತಾಯಿಯ ಮನೆಯಲ್ಲಿ. ಅವಳು ನನ್ನ ಬಳಿಗೆ ಬಂದು ಹೋಗುತ್ತಿದ್ದಳು. ನನ್ನನ್ನು ತುಂಬಾ ಪ್ರೀತಿಸುತ್ತಾಳೆ, ಆದರೆ ನನ್ನ ಮೇಲೆ, ಮಕ್ಕಳು ಹುಟ್ಟಿದ ಕೂಡಲೇ ನನ್ನನ್ನು ತ್ಯಜಿಸಿದಿರಿ ಎಂದು ಆರೋಪವನ್ನು ಹೊರಿಸುತ್ತಾಳೆ'.

ಓಹ್! ಜೀವನದ ಪ್ರತಿಯೊಂದು ಮಗ್ಗುಲನ್ನು ನಿಭಾಯಿಸುವುದು ಸುಲಭವಲ್ಲ. ಸಂಬಂಧಗಳನ್ನು ಕೂಡಿಸಲು ನಾವೇ ಚೆಲ್ಲಾಪಿಲ್ಲಿಯಾಗಬೇಕಾಗುತ್ತದೆ. ಪಾಲ್, ನಾನು ನಿಮ್ಮನ್ನು ಎಷ್ಟು ಅರ್ಥ ಮಾಡಿಕೊಂಡಿರುವೆನೋ, ಅದರ ಪ್ರಕಾರ ನೀವು ಒಳ್ಳೆಯ ಮನುಷ್ಯರು'.

ಪಾಲ್ ಮುಗುಳ್ನಕ್ಕು ಹೇಳಿದ, 'ನ್ಯಾನ್ಸಿ, ನೀವೂ ತುಂಬಾ ಒಳ್ಳೆಯವರು. ನೀವು ಜೀವನದಲ್ಲಿ ಮುಂದುವರೆಯಿರಿ...'

ಪಾಲ್, ನೀವು ಶೇಕ್ಸ್‌ಪಿಯರರ ಪುಸ್ತಕಗಳನ್ನು ಓದಿರಬೇಕು. ಅವರು ಮಾತಿನಲ್ಲಿ ಶ್ರೀಮಂತ ರಾಗಿದ್ದರು. ತಮ್ಮ ಒಂದು ನಾಟಕದಲ್ಲಿ, ಪಾತ್ರ ಒಂದರ ಮೂಲಕ, 'ನನ್ನ ಅಂತರಾತ್ಮಕ್ಕೆ ಸಾವಿರಾರು ನಾಲಿಗೆಗಳಿವೆ, ಪ್ರತಿಯೊಂದು ನಾಲಿಗೆಯಲ್ಲಿ ಅನೇಕ ಕಥೆಗಳಿವೆ, ಪ್ರತಿಯೊಂದು ಕಥೆ ನನ್ನನ್ನು ಖಳನಾಯಕನೆಂದು ಹೇಳುತ್ತದೆ!' ಎಂದು ಹೇಳುತ್ತಾರೆ. ನಾನು ಅದೇ ಪಾತ್ರವಾಗಿದ್ದೇನೆ... ಎಲ್ಲವನ್ನೂ ನಿಮ್ಮೆದುರಿಗಿಡುತ್ತಿದ್ದೇನೆ. ನನ್ನೆಲ್ಲಾ ದುಃಖ—ನೋವು, ವೇದನೆ, ಹಾಹಾಕಾರ, ಕಳಂಕ ಎಲ್ಲವನ್ನೂ ನಿಮ್ಮೆದುರು ಸುರಿಯುತ್ತಿದ್ದೇನೆ. ಏಕೆಂದರೆ ಲಾರ್ಸ್‌ನೊಂದಿಗಿನ ನನ್ನ ನಂಬಿಕೆ ಮಾಯವಾಗಿತ್ತು. ಆದರೆ ಒಂದು ಒಳ್ಳೆಯ ಸಂಗತಿ ಸಂಭವಿಸಿತು, ನನ್ನ ಮತ್ತು ಅಬ್ರಾಹಮ್‌ನ ನಡುವೆ ಈಗ ಮೈತ್ರಿಯ ಸಂಬಂಧವೇರ್ಪಟ್ಟಿತ್ತು. ಅವನು ಚರ್ಚ್ ಮತ್ತು ಮಿಶನರಿಯನ್ನು ತ್ಯಜಿಸಿದ್ದ. ಬಿಡುವುದೇನು ಬಂತು, ಅವನನ್ನು ತೆಗೆದು ಹಾಕಲಾಗಿತ್ತು. ಪಾಪದ ಕೊಡ ಒಂದಲ್ಲ ಒಂದು ದಿನ ಒಡೆಯುವುದು ಸ್ವಾಭಾವಿಕವೇ!

ನನ್ನ ಗೆಳತಿ ಮಾರಿಯಾ ನನಗೆ ಸುದ್ದಿಯನ್ನು ಮುಟ್ಟಿಸಿದ್ದಳು. ಸಂಜೆ ಏಳು ಗಂಟೆಗೆ ನನ್ನ ಬಳಿ ಮೊಂಬ್ಬಾಸಾದಿಂದ ಫೋನ್ ಬಂದಿತ್ತು.

'ನ್ಯಾನ್ಸಿ, ನೀನು ವಿಷಯವನ್ನು ಕೇಳಿದೆಯಾ...?'

'ಏನು?'

'ನಿನ್ನೆ ಫಾದರ್ ಡಿಸೋಜಾ ಚರ್ಚ್‌ನಲ್ಲಿ, 'ಅಬ್ರಾಹಮ್‌ನನ್ನು ಚರ್ಚ್‌ನಿಂದ ತೆಗೆದು ಹಾಕಲಾಗಿದೆ' ಎಂದು ಘೋಷಿಸಿದರು. ಅವರು ಹೆಚ್ಚು ವ್ಯಾಖ್ಯಾನಿಸದೆ, ಅವನ ಪಾಪದ ಕೆಲಸಗಳಿಗೆ ಈ ಶಿಕ್ಷೆ ಎಂದಷ್ಟೇ ಹೇಳಿದರು. ಅಲ್ಲದೆ ಅವನಿಗೆ, ಇನ್ನೆಂದೂ ಚರ್ಚ್ ಸಮೀಪದಿಂದ ಹಾದೂ ಹೋಗಬಾರದು ಎಂದು ಎಚ್ಚರಿಕೆಯನ್ನು ಕೊಟ್ಟರು. ಮನೆಯನ್ನು ಸಹ ಖಾಲಿ ಮಾಡಲು ಆದೇಶ ಜಾರಿಯಾಯಿತು...'

ನನಗೆ ಕೂಡಲೇ ಜೋಶ್‌ನ ನೆನಪಾಯಿತು... ಜೋಶುಆ... ಅವನ ಪರಿಸ್ಥಿತಿ ಏನಾಗುವುದು? ಅವನೆಲ್ಲಿಗೆ ಹೋಗುತ್ತಾನೆ?

ನಾನು ಅಬ್ರಾಹಮ್‌ಗೆ ಒಂದು ತಡೆಯಾಗಿದ್ದೆ. ಅವನ ಜೀವನದಿಂದ ದೂರವಾದಾಗ ನನ್ನ ತಡೆ ಕೊನೆಗೊಂಡಿತು. ಅವನ ಸೆಕ್ಸ್ ಸ್ಕ್ಯಾಂಡಲ್ ಬಟಾಬಯಲಾಯಿತು. ನಾನು ಮಾರಿಯಾಳೊಂದಿಗೆ ಮಾತನಾಡಿ ಮೊಂಬ್ಬಾಸಾದಲ್ಲಿದ್ದ ಅಬ್ರಾಹಮ್‌ನ ಮನೆಗೆ ಫೋನ್ ಮಾಡಿದೆ. ಜೋಶ್ ಫೋನ್ ಎತ್ತಿದ. ಅವನ ಧ್ವನಿ ಸಹಜವಾಗಿತ್ತು. ನೀನು ಮನೆಯಲ್ಲಿ ಒಂಟಿಯಾಗಿದ್ದೀಯ ಎಂದು ಕೇಳಿದೆ. ಅವನು 'ಹೌದು' ಎಂದ.

'ನಿನ್ನ ಡ್ಯಾಡಿ ಎಲ್ಲಿದ್ದಾರೆ?'

'ಗೊತ್ತಿಲ್ಲ'.

'ನಿನ್ನ ಡ್ಯಾಡಿ ನಿನಗೇನಾದರೂ ಹೇಳಿದ್ರಾ?'

'ಏನು?'

'ನಿನಗೇನೂ ಗೊತ್ತಿಲ್ವ?'

'ಅಂದರೆ ಏನು?'

'ನಿನ್ನ ಡ್ಯಾಡಿಯನ್ನು ಚರ್ಚ್‌ನಿಂದ ಹೊರ ಹಾಕಿದ್ದಾರೆ. ಫಾದರ್ ಡಿಸೋಜಾ ಅವರನ್ನು ಫೈರ್ ಮಾಡಿದ್ದಾರೆ'.

'ಡ್ಯಾಡಿಯೇ ಖುದ್ದು ರಿಸೈನ್ ಮಾಡಿದರು. ನನಗೆ ಚರ್ಚ್ ನೌಕರಿ ಇಷ್ಟವಿಲ್ಲ, ನಾವು ನೈರೋಬಿಗೆ ಹೋಗೋಣ, ಅಂತ ಡ್ಯಾಡಿಯೇ ಹೇಳುತ್ತಿದ್ದರು. ಅಲ್ಲಿ ಡ್ಯಾಡಿ ಬಿಸಿನೆಸ್ ಮಾಡ್ತಾರೆ. ಅಲ್ಲಿ ಡ್ಯಾಡಿಗೆ ತುಂಬಾ ಸ್ನೇಹಿತರಿದ್ದಾರೆ'.

ನಾನು ಮಗನಿಗೆ ಹೆಚ್ಚೇನು ಹೇಳಲಿ? ಇಷ್ಟನ್ನೇ ಹೇಳಿದೆ, 'ಸರಿ ಜೋಶ್, ನಿನ್ನ ಬಗ್ಗೆ ಗಮನ ಕೊಡು. ಏನಾದ್ರು ಸಮಸ್ಯೆಯಾದ್ರೆ ನನಗೆ ಹೇಳು...'

ಜೋಶ್‌ನೊಂದಿಗೆ ಮಾತು ಮುಗಿಸಿ,